ಸಣ್ಣ ಕೈಗಾರಿಕೆಗಳ ಬಗ್ಗೆ

81 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿರುವ ಸಬ್ಸಿಡಿ ಬಾಕಿ ಹಣವೆಷ್ಟು? ವರ್ಷಗಳಿಂದ ಬಾಕಿ ಇದೆ?

ಆ) ಯಾವಾಗ ಸಬ್ಸಿಡಿ ಬಿಡುಗಡೆ ಮಾಡಲಾಗುವುದು?

ಶ್ರೀ ಎನ್.ಎಂ.ನಬಿ (ಸಣ್ಣ ಕೈಗಾರಿಕೆ ಸಚಿವರು)

ಅ) ದಿನಾಂಕ 15.3.1995 ರಲ್ಲಿ ಇದ್ದಂತೆ ಸಣ್ಣ ಕೈಗಾರಿಕೆಗಳಿಗೆ ನೀಡಿದ ಬಾಕಿ ಹಣ 4362.18 ಲಕ್ಷ ರೂಪಾಯಿಗಳಾಗಿರುತ್ತದೆ.

ನವೆಂಬರ್ 1993ರವರೆಗೆ ಸಂಬಂಧಿಸಿದಂತೆ ಎಲ್ಲಾ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ ನೀಡಲಾಗಿದೆ. ಡಿಸೆಂಬರ್ 1993ರಿಂದ ಮಾರ್ಚ್ 1994ರವರೆಗೆ 1046 ಸಂಖ್ಯೆಯ ಸಣ್ಣ ಕೈಗಾರಿಕೆಗಳಿಗೆ ಶೇಕಡ 50 ರಷ್ಟು ಸಹಾಯ ಧನ ನೀಡಲಾಗಿದೆ. ಮಾರ್ಚ್ 1994 ರ ನಂತರದ ಎಲ್ಲ ಪ್ರಕರಣಗಳಲ್ಲಿಯೂ ಸಹಾಯ ಧನ ಬಾಕಿ ಇದೆ.

ಆ) ಸಹಾಯ ಧನವನ್ನು ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು.

ಆಶ್ರಯ ಯೋಜನೆಯ ಬಗ್ಗೆ

79 - ಶ್ರೀ ಕೆ.ಎನ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) "ಆಶ್ರಯ" ಯೋಜನೆಯನ್ನು ಸರ್ಕಾರವವರು ಮುಂದುವರಿಸುವರೇ

ಆ) ಈ ಯೋಜನೆಯಡಿಯಲ್ಲಿ ಮಂಜೂರಾಗಿರುವ ಮನೆಗಳು ಪೂರ್ಣಗೊಳ್ಳಲು ಸರ್ಕಾರ ತುರ್ತು ಗಮನ ನೀಡುವುದೇ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಹೌದು

ಆ) ಹೌದು

ರಾಜ್ಯದಲ್ಲಿ ಸಕ್ಕರೆ ಇಳುವರಿ

154 - ಶ್ರೀ ಯು.ಬಿ. ಬಣಕಾಸ್ (ಹಿರೇಕೇರೂರು) : ಮಾನ್ಯ ಸಕ್ಕರೆ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳ 1993-94ನೇ ಸಾಲಿನಲ್ಲಿ ಸಕ್ಕರೆ ಇಳುವಳಿಯ ಪ್ರಮಾಣವೇನು?

ಆ) ಈ ಇಳುವರಿ ಪ್ರಮಾಣದ ಆಧಾರದ ಮೇಲೆ 1994-95ನೇ ಸಾಲಿಗೆ ಪ್ರತಿಯೊಂದು ಕಾರ್ಖಾನೆಯವರು ರೈತರು ತಂದ ಕಬ್ಬಿಗೆ, ಟನ್ನಿಗೆ ಎಷ್ಟು ಬೆಲೆ ಕೊಡಬೇಕಾಗುತ್ತದೆ?

ಇ) 1993-94ರಲ್ಲಿ ಅವರೆಲ್ಲರೂ ಕೊಟ್ಟ ಬೆಲೆಯೇನು?

ಈ)

ಈ ಅನೇಕ ಸಕ್ಕರೆ ಕಾರ್ಖಾನೆಗಳು ಪ್ರತಿ ವರ್ಷ ಬೆಲೆ ನಿರ್ಧರಿಸಿದಾಗ ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಗದಿಪಡಿಸಿದ ಬೆಲೆಯನ್ನು ಹಾಗೂ ಸಕ್ಕರೆ ಇಳುವರಿಯನ್ನು ಗಮನದಲ್ಲಿಟ್ಟುಕೊಂಡು ರೈತರು ಬೆಲೆಯನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಬೇಕೆಂದು

ಸರ್ಕಾರದ ಆದೇಶವಿದ್ದರೂ ಅನೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳು ರೈತರ ಸಭೆ ಕರೆಯದಿದ್ದರಿಂದ ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಾದ ಆದೇಶ ಕೊಡುವುದೆ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ಖಾತೆ ಸಚಿವರು) :

ಅ) ಮಾಹಿತಿಯನ್ನು ಅಡಕ - ಅ ದಲ್ಲಿ ನೀಡಲಾಗಿದೆ.

ಆ) ಮಾಹಿತಿಯನ್ನು ಅಡಕ - ಅ ದಲ್ಲಿ ನೀಡಲಾಗಿದೆ.

ಇ) ಮಾಹಿತಿಯನ್ನು ಅಡಕ - ಅ ದಲ್ಲಿ ನೀಡಲಾಗಿದೆ.

ಈ) ಪ್ರತಿವರ್ಷ ಭಾರತದ ಸರ್ಕಾರವು ಶೇಕಡ 8.5 ಇಳುವರಿ ಯುಳ್ಳ ಕಬ್ಬಿಗೆ ಶಾಸನಬದ್ಧ ಕನಿಷ್ಠ ಬೆಲೆಯನ್ನು (ಸ್ಟ್ಯಾಚುಟರಿ ಮಿನಿಮಮ್ಮ ಪ್ರೈಸ್) ಪ್ರಕಟಿಸುತ್ತದೆ. ಕಾರ್ಖಾನೆಗಳ ಸಕ್ಕರೆ ಇಳುವರಿಯ ಗಳಿಕೆಗನುಗುಣವಾಗಿ ಕಬ್ಬಿನ ಬೆಲೆಯು ಜಾಸ್ತಿಯಾಗುತ್ತದೆ. ರಾಜ್ಯ ಸರ್ಕಾರವು ಸ್ಥಳೀಯ ಪರಿಸ್ಥಿತಿ, ಕಬ್ಬು ಬೆಳೆಗೆ ತಗಲುವ ವೆಚ್ಚ, ಕಾರ್ಖಾನೆಗಳು ಗಳಿಸುವ ಆದಾಯ ಇತ್ಯಾದಿ ಅಂಶಗಳನ್ನೆಲ್ಲಾ ಪರಿಗಣಿಸಿ ಪ್ರತಿ ವರ್ಷವೂ ಕಬ್ಬಿಗೆ ರಾಜ್ಯ ಸಲಹಾ ಬೆಲೆಯನ್ನು ನಿಗದಿಪಡಿಸುತ್ತದೆ. ಹೀಗೆ ನಿಗದಿಪಡಿಸುವ ಬೆಲೆಯು ಶೇಕಡ 8.5 ಇಳುವರಿಗೆ ಜೋಡಣೆಯಾಗಿರುತ್ತದೆ. ಹಾಗೂ ರಾಜ್ಯ ಸಲಹಾ ಬೆಲೆಯೂ ಕೇಂದ್ರ ಸರ್ಕಾರ ನಿಗದಿಪಡಿಸುವ ಬೆಲೆಯೂ ಕೇಂದ್ರ ಸರ್ಕಾರ ನಿಗದಿಪಡಿಸುವ ಶಾಸನ ಬದ್ಧ ಕನಿಷ್ಠ ಬೆಲೆಗಿಂತ ಜಾಸ್ತಿ ಇರುತ್ತದೆ.

ರಾಜ್ಯ ಸರ್ಕಾರವು ಕಬ್ಬಿಗೆ ಸಲಹಾ ಬೆಲೆಯನ್ನು ನಿಗದಿಪಡಿಸುವ ಮುನ್ನ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಪ್ರತಿವರ್ಷ ಉನ್ನತ ಮಟ್ಟದ ಸಮಿತಿಯ (ಹೈಪವರ್ ಕಮೀಟಿ) ಸಭೆಯನ್ನು ಏರ್ಪಡಿಸಲಾಗುತ್ತದೆ. ಸದರಿ ಉನ್ನತ ಮಟ್ಟದ ಸಮಿತಿಯ ,ಸಭೆಗೆ ಕಬ್ಬು ಬೆಳೆಯುವ ಪ್ರದೇಶದ ಎಲ್ಲಾ ಶಾಸಕರುಗಳನ್ನೂ , ಲೋಕಸಭಾಸದಸ್ಯರುಗಳನ್ನೂ, ರೈತಮುಖಂಡರನ್ನೂ, ಕಾರ್ಖಾನೆಗಳ ಪ್ರತಿನಿಧಿಗಳನ್ನು ಆಹ್ವಾನಿಸಿ, ಚರ್ಚಿಸಿ,ಸಲಹೆಗಳನ್ನು ಪಡೆಯಲಾಗುತ್ತದೆ., ಕಬ್ಬು ಬೆಳೆಗೆ ತಗಲುವ ವೆಚ್ಚ, ಸಕ್ಕರೆ ಇಳುವರಿ, ಕಾರ್ಕಾನೆಗಳು ಸಕ್ಕರೆ ಮತ್ತು ಉಪ ಉತ್ಪನ್ನಗಳಿಂದ ಗಳಿಸುವ ಆದಾಯ ಇತ್ಯಾದಿ ಅಂಶಗಳನ್ನು ಹಾಗೂ ಉನ್ನತ ಮಟ್ಟದ ಸಮಿತಿಯ ಸಭೆಯಲ್ಲಿನ ಸಲಹೆಗಳನ್ನು ಪರಿಶೀಲಿಸಿ ಕಾರ್ಖಾನೆಗಳ ಹಾಗೂ ರೈತರ ಹಿತದೃಷ್ಟಿಯಿಂದ ರಾಜ್ಯ ಸಲಹಾ ಬೆಲೆಯನ್ನು ನಿಗದಿಪಡಿಸುವುದು. ಈ ಕಾರಣಗಳಿಂದಾಗಿ ಕಾರ್ಖಾನೆಗಳು ರೈತರ ಸಭೆ ಕರೆದು ರೈತರು ಬೆಲೆಯನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಬೇಕೆಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - ಆ

ಕ್ರ.ಸಂ	ಸಕ್ಕರೆ ಕಾರ್ಖಾನೆಯ ಹೆಸರು	1993-94ನೇ ಸಾಲಿನಲ್ಲಿ ಗಳಿಸಿದ ಸಕ್ಕರೆ ಇಳುವರಿ	1994-95ನೇ ಸಾಲಿಗೆ ರಾಜ್ಯ ಸಲಹಾ ಬೆಲೆ ಪ್ರಕಾರ ಕೊಡಬೇಕಾದ ಕಬ್ಬಿನ ಬೆಲೆ ಟನ್ ಒಂದಕ್ಕೆ (ರಾಜ್ಯ ಸಲಹಾ ಬೆಲೆ ಶೇ. 8.5 ಇಳುವರಿವುಳ್ಳ ಒಂದು ಟನ್ ಕಬ್ಬಿಗೆ (ಅ) ಡಿಸ್ಟಿಲರಿ ಇರುವ ಕಾರ್ಖಾನೆಗಳು ರೂ. 604 (ಆ) ಡಿಸ್ಟಿಲರಿ ಇಲ್ಲದ ಕಾರ್ಖಾನೆಗಳು ರೂ. 565 ಪಾವತಿಸಬೇಕು)	1993-94ನೇ ಸಾಲಿಗೆ ಟನ್ ಒಂದಕ್ಕೆ ಪಾವತಿಸಿರುವ ಕಬ್ಬಿನ ಬೆಲೆ. (ರಾಜ್ಯ ಸಲಹಾ ಬೆಲೆ ಶೇ. 8.5 ಇಳುವರಿಯುಳ್ಳ ಒಂದು ಟನ್ ಕಬ್ಬಿಗೆ ರೂ. 465)	
				ಎಕ್ಸ್‌ಫ್ಯಾಕ್ಟರಿ	ಎಕ್ಸ್‌ಫೀಲ್ಡ್
1	2	3	4	5	6
ಸಹಕಾರಿ ವಲಯ :					
1.	ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ	9.63	640.10	517.50	-
2	ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ	8.85	588.25	-	600.00
3	ದಕ್ಷಿಣ ಕನ್ನಡ ಸಸಕಾ ನಿ.	8.70	578.30	500.00	-
4.	ದೂದ್‌ಗಂಗಾ ಕೃಷ್ಣ ಸಸಕಾ ನಿ.	12.52	832.30	-	860.00 *
5.	ಘಟಪ್ರಭಾ ಸಸಕಾ ನಿ.	11.23	746.45	-	751.00
6.	ಹಾಲಸಿದ್ದನಾಥ ಸಸಕಾ ನಿ.	11.11	738.50	-	825.00
7.	ಹಿರಣ್ಯಕೇಶಿ ಸಸಕಾ ನಿ.	10.93	776.70	-	950.00 *
8.	ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ	9.20	611.50	530.00	-
9.	ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆ	– ಕಾರ್ಯಾರಂಭ ಮಾಡಿರುವುದಿಲ್ಲ –			
10.	ಕರ್ನಾಟಕ ಸಸಕಾ ನಿ.	10.27	682.65	ರೂ. 616 ಶೇ. 50 ರಷ್ಟು ಸಾಗಾಣಿಕೆ ಸಹಾಯಧನ ರೂ. 10 ಕಟಾವು ಸಹಾಯಧನ	
11.	ಮಲಪ್ರಭಾ ಸಸಕಾ ನಿ.	11.41	810.80	-	950.00 *

12.	ನಂದಿ ಸಸಕಾ ನಿ.	10.90	724.50	-	710.00 *
13.	ಪಾಂಡವಪುರ ಸಸಕಾ ನಿ.	9.24	614.20	550.00	-
14.	ರಾಯಬಾಗ್ ಸಸಕಾ ನಿ.	12.43	830.20	-	775.00
15.	ಶ್ರೀರಾಮ ಸಸಕಾ ನಿ	8.51	565.65	530.00	-
16.	ಸಹಕಾರ ಸಕ್ಕರೆ ಕಾರ್ಖಾನೆ - ಆಳಂದ್	8.39	557.70	660.00	-
17.	ವಾಣಿವಿಲಾಸ ಸಸಕಾ ನಿ.	– ಕಾರ್ಯಾರಂಭ ಮಾಡಿರುವುದಿಲ್ಲ –			
ಸಾರ್ವಜನಿಕ ವಲಯ :					
18.	ಮೈಸೂರು ಶುಗರ್ ಕಂ	9.45	671.50	600.00*	-
19.	ಎಂ.ಪಿ.ಎಂ.	10.03	666.70	635.00*	-
ಜಂಟಿ ವಲಯ :					
20.	ಗಂಗಾವತಿ ಶುಗರ್ಸ್	9.80	651.40	549.80	-
21.	ದಾವಣಗೆರೆ ಶುಗರ್ಸ್	9.75	648.10	610.00	-
ಖಾಸಗಿ ವಲಯ :					
22.	ಬನ್ನಾರಿ ಆಮ್ಮನ್ (ಶುಗರ್ಸ್)	9.13	606.85	600.00	-
23.	ಚಾಮುಂಡೇಶ್ವರ ಶುಗರ್ಸ್	9.54	634.10	600.00	-
24.	ಐ.ಎಸ್.ಆರ್.	9.76	648.75	570.40	-
25.	ಗೋದಾವರಿ ಶುಗರ್ಸ್	11.32	752.45	-	755.00*
26.	ಶರಗುಪ್ಪ (ದೇಶನೂರು)	10.35	687.95	530.00	-
27.	ಶರಗುಪ್ಪ (ಗೌರಿಬಿದನೂರು)	9.18	610.20	550.00	-
28.	ತುಂಗಭದ್ರಾ	8.90	591.60	570.00	-
29.	ಮಹದೇಶ್ವರ	8.44	565.00	ಕಾರ್ಯಾರಂಭ ಮಾಡಿರುವುದಿಲ್ಲ	-
30.	ಉಗಾರ್	12.58	893.90	-	725.00*

* ಟಿಪ್ಪಣಿ : ಅಂತಿಮ ಬೆಲೆ ನಿಗಧಿಪಡಿಸಬೇಕಾಗಿದೆ.